# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 133+157

ಸದಸ್ಯರ ಹೆಸರು : ಡಾ: ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) ಮತ್ತು ಡಾ: ಎಂ.ಜಿ.ಮುಳೆ (ವಿಧಾನ ಸಭೆಯಿಂದ ಚುನಾಯಿತರಾದವರು )

ಉತ್ತರಿಸಬೇಕಾದ ದಿನಾಂಕ : 05.03.2025

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

<table>
<tr><th>ಕ್ರ ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ)</td><td>ರಾಜ್ಯದಲ್ಲಿ ಹಾಲು ಉತ್ಪಾದಕರಿಗೆ ಬಾಕಿ ಉಳಿಸಿಕೊಂಡಿರುವ ಪ್ರೋತ್ಸಾಹಧನ ಹಣ ಎಷ್ಟು;</td><td>ಹಾಲು ಉತ್ಪಾದಕರಿಗೆ ಬಾಕಿ ಉಳಿಸಿಕೊಂಡಿರುವ ಪ್ರೋತ್ಸಾಹ ಧನ ಹಣದ ವಿವರ ಈ ಕೆಳಗಿನಂತಿದೆ.<br>
<table>
<tr><th>ವರ್ಗ</th><th>ಪಾವತಿಸಲು ಬಾಕಿ ಇರುವ ಪ್ರೋತ್ಸಾಹ ಧನದ ಮೊತ್ತ (ರೂ.ಕೋಟಿಗಳಲ್ಲಿ)</th></tr>
<tr><td>ಸಾಮಾನ್ಯ ವರ್ಗ</td><td>613.58</td></tr>
<tr><td>ಪರಿಶಿಷ್ಟ ಜಾತಿ</td><td>18.29</td></tr>
<tr><td>ಪರಿಶಿಷ್ಟ ಪಂಗಡ</td><td>24.20</td></tr>
<tr><td>ಒಟ್ಟು</td><td>656.07</td></tr>
</table></td></tr>
<tr><td>ಆ)</td><td>ರಾಜ್ಯದಲ್ಲಿ ಹಾಲಿನ ಖರೀದಿ ದರವನ್ನು ಹೆಚ್ಚಿಸುವಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು;</td><td>ಹಾಲಿನ ಖರೀದಿ ದರ ಹೆಚ್ಚಿಸುವ ಸಂಬಂಧ ಇರುವ ಸಾಧಕ-ಭಾದಕಗಳ ಬಗ್ಗೆ ರಾಜ್ಯ ಸರ್ಕಾರದ ಪಶುಸಂಗೋಪನೆ ಮತ್ತು ಸಹಕಾರ ಸಚಿವರ ಅಧ್ಯಕ್ಷತೆಯಲ್ಲಿ ಎಲ್ಲಾ ಒಕ್ಕೂಟಗಳ ಅಧ್ಯಕ್ಷರುಗಳು, ವ್ಯವಸ್ಥಾಪಕ ನಿರ್ದೇಶಕರುಗಳು, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಕರ್ನಾಟಕ ಹಾಲು ಮಹಾಮಂಡಳದ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರ ಸಮ್ಮುಖದಲ್ಲಿ ಚರ್ಚಿಸಲಾಗಿದ್ದು, ಹಾಲಿನ ಮಾರಾಟ ದರವನ್ನು ಹೆಚ್ಚಿಸಿ, ಹಾಲಿನ ಖರೀದಿ ದರವನ್ನು ಹೆಚ್ಚಿಸುವ ಸಂಬಂಧ ಸರ್ಕಾರದ ಪರಿಶೀಲನೆಯಲ್ಲಿದೆ.</td></tr>
<tr><td>ಇ)</td><td>ಎಷ್ಟು ಜನ ಹಾಲು ಉತ್ಪಾದಕರಿಗೆ ಹಾಲಿನ ಪ್ರೋತ್ಸಾಹಧನ ನೀಡಿರುವುದಿಲ್ಲ ಮತ್ತು ಎಷ್ಟು ತಿಂಗಳುಗಳಿಂದ ಬಾಕಿ ಇದೆ; (ಜಿಲ್ಲಾವಾರು ಮಾಹಿತಿ ನೀಡುವುದು)</td><td>ಮಾಹೆಯಾನ 904547 ಫಲಾನುಭವಿಗಳಿಗೆ ಪ್ರೋತ್ಸಾಹ ಧನ ಪಾವತಿಸಲು ಬಾಕಿ ಇರುತ್ತದೆ. ಸಾಮಾನ್ಯ ವರ್ಗದ 817074 ಹಾಲು ಉತ್ಪಾದಕರಿಗೆ 5 ತಿಂಗಳು (ಅಕ್ಟೋಬರ್-2024 (16-ಜಿಲ್ಲೆಗಳಿಗೆ) ರಿಂದ ಫೆಬ್ರುವರಿ-2025 ರವರೆಗೆ) ಪರಿಶಿಷ್ಟ ಜಾತಿಯ 52467 ಹಾಲು ಉತ್ಪಾದಕರಿಗೆ 2 ತಿಂಗಳು (ಜನವರಿ-2025 ಮತ್ತು ಫೆಬ್ರುವರಿ-2025) ಮತ್ತು ಪರಿಶಿಷ್ಟ ಪಂಗಡದ 35006 ಹಾಲು ಉತ್ಪಾದಕರಿಗೆ 4 ತಿಂಗಳುಗಳಿಗೆ (ನವೆಂಬರ್-2024 ರಿಂದ ಫೆಬ್ರುವರಿ-2025ರವರೆಗೆ) ಬಾಕಿ ಇರುತ್ತದೆ. (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1,2 ಮತ್ತು 3 ರಲ್ಲಿ ನೀಡಲಾಗಿದೆ).</td></tr>
<tr><td>ಈ)</td><td>ಅತಿವೃಷ್ಟಿ ಅನಾವೃಷ್ಟಿಯಿಂದ ಈಗಾಗಲೇ ತೊಂದರೆಗೊಳಗಾಗಿರುವ ರೈತರಿಗೆ ಪ್ರೋತ್ಸಾಹಧನ ನೀಡದಿರುವುದರಿಂದ ಅವರು ಸಂಕಷ್ಟಕ್ಕೀಡಾಗಿರುವುದು</td><td>ರಾಜ್ಯದ ರೈತರಿಗೆ ಪ್ರೋತ್ಸಾಹಧನ ಪಾವತಿಸುವಲ್ಲಿ ವಿಳಂಬವಾಗಿರುವುದರಿಂದ ರೈತರು ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆ.<br>ಪ್ರೋತ್ಸಾಹಧನ ನೀಡಲು ಹೆಚ್ಚುವರಿ ಅನುದಾನ ಅವಶ್ಯವಿದ್ದು, ಅನುದಾನ ಬಿಡುಗಡೆಗಾಗಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಅನುದಾನ ಬಿಡುಗಡೆಯಾದ</td></tr>
</table>

| | | |
|---|---|---|
| | ಸರ್ಕಾರದ ಗಮನಕ್ಕೆ ಬಂದಿದೆಯೇ; | ನಂತರ ಬಾಕಿ ಪ್ರೋತ್ಸಾಹ ಧನ ನೀಡಲಾಗುವುದು. |
| ಉ) | ಬಂದಿದ್ದರೆ ಎಷ್ಟು ದಿನಗಳಲ್ಲಿ ಪ್ರೋತ್ಸಾಹಧನವನ್ನು ನೀಡಲಾಗುವುದು? | |
| ಊ) | ಪಶು ಆಹಾರಕ್ಕೆ ಬಳಸುವ ಮೆಕ್ಕೆಜೋಳವನ್ನು ರೈತರಿಂದಲೇ ನೇರವಾಗಿ ಖರೀದಿಸುವ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ಪ್ರಸ್ತುತ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತವು (ಕಹಾಮ) ಮಾಹೆಯಾನ ಸರಾಸರಿ 72000 ಮೆ.ಟನ್ ಪಶು ಆಹಾರವನ್ನು ಉತ್ಪಾದಿಸಿ ರಾಜ್ಯದ ಹೈನುಗಾರರಿಗೆ ಒಕ್ಕೂಟಗಳ ಮೂಲಕ ಸರಬರಾಜು ಮಾಡುತ್ತಿದ್ದು, ಕಹಾಮದ 05 ಸಂಖ್ಯೆ ಪಶು ಆಹಾರ ಘಟಕಗಳು ಹಾಗೂ 03 ಸಂಖ್ಯೆ ಪಿ.ಪಿ.ಪಿ ಮಾದರಿಯ ಕಹಾಮ ಪಶು ಆಹಾರ ಘಟಕಗಳಿಂದ ಒಟ್ಟಾರೆ ವಾರ್ಷಿಕವಾಗಿ ಅಂದಾಜು 8.65 ಲಕ್ಷ ಮೆ.ಟನ್ ಪಶು ಆಹಾರವನ್ನು ರಾಜ್ಯದ ಹೈನುಗಾರರಿಗೆ ಸರಬರಾಜು ಮಾಡುತ್ತಿದ್ದು, ಕಹಾಮದ ಪಶು ಆಹಾರ ಘಟಕಗಳಿಗೆ ಮಾತ್ರ ವಾರ್ಷಿಕವಾಗಿ ಅಂದಾಜು 1.6 ಲಕ್ಷ ಮೆ.ಟನ್‌ಗಳಷ್ಟು ಮೆಕ್ಕೆಜೋಳದ ಅವಶ್ಯವಿರುತ್ತದೆ.<br><br>2019-20ನೇ ಸಾಲಿನಿಂದಲೂ ಪಶು ಆಹಾರ ಉತ್ಪಾದನೆಗೆ ಅವಶ್ಯವಿರುವ ಮೆಕ್ಕೆಜೋಳವನ್ನು ರೈತರ ಮುಖಾಂತರ 4ಜಿ ವಿನಾಯಿತಿ ಪಡೆದು ನೇರವಾಗಿ ಖರೀದಿಸಲಾಗುತ್ತಿದೆ. ರೈತರ ಮುಖಾಂತರ ನೇರವಾಗಿ ಮೆಕ್ಕೆಜೋಳ ಖರೀದಿ ಸಂಬಂಧ 2023-24ನೇ ಸಾಲಿನ ಅಂತ್ಯಕ್ಕೆ ಅಂದಾಜು ರೂ.1.08 ಲಕ್ಷ ಮೆ.ಟನ್ ಮೆಕ್ಕೆಜೋಳವನ್ನು ಖರೀದಿಸಲಾಗಿದ್ದು, ಇದರ ಮೊತ್ತ ಅಂದಾಜು ರೂ.183.18 ಕೋಟಿಗಳನ್ನು ಸಂಬಂಧಪಟ್ಟ ರೈತರ ಖಾತೆಗೆ ನೇರವಾಗಿ DBT ಮುಖಾಂತರ ಪಾವತಿಸಲಾಗಿರುತ್ತದೆ. ಪ್ರಸಕ್ತ ಸಾಲಿಗೆ ಮೆಕ್ಕೆಜೋಳವನ್ನು MSP ದರದಂತೆ ರೂ.2,225/- ಹಾಗೂ ರೂ.175/-ಗಳ ಪ್ರೋತ್ಸಾಹ ಧನದೊಂದಿಗೆ ಒಟ್ಟು ರೂ.2,400/- ಪ್ರತಿ ಕ್ವಿಂಟಾಲ್‌ಗೆ ರೈತರಿಂದ ನೇರವಾಗಿ ಖರೀದಿಸಲು ಕಹಾಮ ಆಡಳಿತ ಮಂಡಳಿಯಲ್ಲಿ ತೀರ್ಮಾನಿಸಲಾಗಿದೆ. ಅದರಂತೆ ಯಥೇಚ್ಛವಾಗಿ ಮೆಕ್ಕೆಜೋಳ ಬೆಳೆಯುವ ರಾಜ್ಯದ ವಿವಿಧ ಭಾಗಗಳಲ್ಲಿ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಖರೀದಿ ಕೇಂದ್ರಗಳನ್ನು ತೆರೆದು ರೈತರಿಂದ ನೇರವಾಗಿ ಖರೀದಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿರುತ್ತದೆ. ಪ್ರಸ್ತುತ 4ಜಿ ವಿನಾಯಿತಿ ದೊರೆತ್ತಿದ್ದು, ಭಾರತ ಸರ್ಕಾರದ ನಿರ್ದೇಶನದಂತೆ 2024-25ನೇ ಸಾಲಿಗೆ ಮೆಕ್ಕೆಜೋಳ ಖರೀದಿಯ ಸಂದರ್ಭದಲ್ಲಿ ಬಯೋಮೆಟ್ರಿಕ್ ಕಡ್ಡಾಯಗೊಳಿಸಲಾಗಿರುತ್ತದೆ.<br><br>ಈ ಸಂಬಂಧ ಕರ್ನಾಟಕ ಸರ್ಕಾರದ ಆಹಾರ ಮತ್ತು ನಾಗರಿಕ ಸೇವೆಗಳ ಇಲಾಖೆಯಿಂದ ತಂತ್ರಾಂಶದ ನಿರೀಕ್ಷೆಯಲ್ಲಿದ್ದು, ತದನಂತರ ಸೂಕ್ತ ಕ್ರಮವಹಿಸಲಾಗುವುದು. |

ಸಂಖ್ಯೆ: ಪಸಂಮೀ 11 ಕಹಾಮ 2025

(ಕೆ.ವೆಂಕಟೇಶ್)
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

**ಅನುಬಂಧ-1 - 100- ಸಾಮಾನ್ಯ ವರ್ಗದ** ಹಾಲು ಉತ್ಪಾದಕರಿಗೆ ಪಾವತಿಸಬೇಕಾಗಿರುವ ಪ್ರೋತ್ಸಾಹಧನ ಜಿಲ್ಲಾವಾರು ವಿವರ.

(ರೂ. ಕೋಟಿಗಳಲ್ಲಿ)

| ಕ್ರ.ಸಂ | ಜಿಲ್ಲೆ | ಫಲಾನುಭವಿಗಳ ಸಂಖ್ಯೆ (ಮಾಹೆಯಾನ) | ಮೊತ್ತ |
|---|---|---|---|
| 1 | ಬಾಗಲಕೋಟೆ | 14157 | 6.17 |
| 2 | ಬಳ್ಳಾರಿ | 1252 | 0.55 |
| 3 | ಬೆಳಗಾವಿ | 28348 | 18.33 |
| 4 | ಬೆಂಗಳೂರು ನಗರ | 15899 | 28.95 |
| 5 | ಬೆಂಗಳೂರು ಗ್ರಾಮಾಂತರ | 30945 | 36.69 |
| 6 | ಬೀದರ್ | 5049 | 1.91 |
| 7 | ಚಾಮರಾಜನಗರ | 29269 | 14.15 |
| 8 | ಚಿಕ್ಕಬಳ್ಳಾಪುರ | 35645 | 26.4 |
| 9 | ಚಿಕ್ಕಮಗಳೂರು | 14265 | 8.93 |
| 10 | ಚಿತ್ರದುರ್ಗ | 17561 | 10.08 |
| 11 | ದಕ್ಷಿಣ ಕನ್ನಡ | 26306 | 15.65 |
| 12 | ದಾವಣಗೆರೆ | 31472 | 16.45 |
| 13 | ಧಾರವಾಡ | 10826 | 4.13 |
| 14 | ಗದಗ | 7021 | 2.55 |
| 15 | ಹಾಸನ | 76480 | 68.12 |
| 16 | ಹಾವೇರಿ | 21417 | 9.36 |
| 17 | ಕಲಬುರಗಿ | 4010 | 1.92 |
| 18 | ಕೊಡಗು | 2187 | 1.04 |
| 19 | ಕೋಲಾರ | 38300 | 41.68 |
| 20 | ಕೊಪ್ಪಳ | 10036 | 3.78 |
| 21 | ಮಂಡ್ಯ | 91565 | 86.99 |
| 22 | ಮೈಸೂರು | 93313 | 43.25 |
| 23 | ರಾಯಚೂರು | 3213 | 1.29 |
| 24 | ರಾಮನಗರ | 51315 | 59.67 |
| 25 | ಶಿವಮೊಗ್ಗ | 31843 | 19.74 |
| 26 | ತುಮಕೂರು | 75485 | 59.98 |
| 27 | ಉಡುಪಿ | 20686 | 9.96 |
| 28 | ಉತ್ತರ ಕನ್ನಡ | 10173 | 3.19 |
| 29 | ವಿಜಯನಗರ | 14796 | 8.56 |
| 30 | ವಿಜಯಪುರ | 4086 | 4.04 |
| 31 | ಯಾದಗಿರಿ | 154 | 0.07 |
| | **ಒಟ್ಟು** | **817074** | **613.58** |

**ಅನುಬಂಧ-2 - 422- ಪರಿಶಿಷ್ಟ ಜಾತಿಯ** ಹಾಲು ಉತ್ಪಾದಕರಿಗೆ ಪಾವತಿಸಬೇಕಾಗಿರುವ ಪ್ರೋತ್ಸಾಹಧನ ಜಿಲ್ಲಾವಾರು ವಿವರ.

(ರೂ. ಕೋಟಿಗಳಲ್ಲಿ)

| ಕ್ರ.ಸಂ | ಜಿಲ್ಲೆ | ಫಲಾನುಭವಿಗಳ ಸಂಖ್ಯೆ (ಮಾಹೆಯಾನ) | ಮೊತ್ತ |
|---|---|---|---|
| 1 | ಬಾಗಲಕೋಟೆ | 908 | 0.15 |
| 2 | ಬಳ್ಳಾರಿ | 80 | 0.01 |
| 3 | ಬೆಳಗಾವಿ | 1827 | 0.25 |
| 4 | ಬೆಂಗಳೂರು ನಗರ | 1025 | 1.36 |
| 5 | ಬೆಂಗಳೂರು ಗ್ರಾಮಾಂತರ | 1994 | 0.88 |
| 6 | ಬೀದರ್ | 324 | 0.19 |
| 7 | ಚಾಮರಾಜನಗರ | 1886 | 0.89 |
| 8 | ಚಿಕ್ಕಬಳ್ಳಾಪುರ | 2297 | 1.89 |
| 9 | ಚಿಕ್ಕಮಗಳೂರು | 915 | 0.41 |
| 10 | ಚಿತ್ರದುರ್ಗ | 1126 | 0.29 |
| 11 | ದಕ್ಷಿಣ ಕನ್ನಡ | 1687 | 0.18 |
| 12 | ದಾವಣಗೆರೆ | 2019 | 0.69 |
| 13 | ಧಾರವಾಡ | 694 | 0.03 |
| 14 | ಗದಗ | 450 | 0.15 |
| 15 | ಹಾಸನ | 4906 | 2.4 |
| 16 | ಹಾವೇರಿ | 1374 | 0.34 |
| 17 | ಕಲಬುರಗಿ | 257 | 0.041 |
| 18 | ಕೊಡಗು | 140 | 0.019 |
| 19 | ಕೋಲಾರ | 2457 | 2.49 |
| 20 | ಕೊಪ್ಪಳ | 644 | 0.089 |
| 21 | ಮಂಡ್ಯ | 5873 | 0.54 |
| 22 | ಮೈಸೂರು | 5986 | 1.38 |
| 23 | ರಾಯಚೂರು | 206 | 0.049 |
| 24 | ರಾಮನಗರ | 3307 | 1.29 |
| 25 | ಶಿವಮೊಗ್ಗ | 2043 | 0.79 |
| 26 | ತುಮಕೂರು | 4842 | 0.92 |
| 27 | ಉಡುಪಿ | 1326 | 0.086 |
| 28 | ಉತ್ತರ ಕನ್ನಡ | 653 | 0.031 |
| 29 | ವಿಜಯನಗರ | 949 | 0.38 |
| 30 | ವಿಜಯಪುರ | 262 | 0.069 |
| 31 | ಯಾದಗಿರಿ | 10 | 0.009 |
| **ಒಟ್ಟು** | | **52467** | **18.293** |

**ಅನುಬಂಧ-3- 423- ಪರಿಶಿಷ್ಟ ಪಂಗಡದ** ಹಾಲು ಉತ್ಪಾದಕರಿಗೆ ಪಾವತಿಸಬೇಕಾಗಿರುವ ಪ್ರೋತ್ಸಾಹಧನ ಜಿಲ್ಲಾವಾರು ವಿವರ.

**(ರೂ. ಕೋಟಿಗಳಲ್ಲಿ)**

| ಕ್ರ.ಸಂ | ಜಿಲ್ಲೆ | ಫಲಾನುಭವಿಗಳ ಸಂಖ್ಯೆ (ಮಾಹೆಯಾನ) | ಮೊತ್ತ |
|---|---|---|---|
| 1 | ಬಾಗಲಕೋಟೆ | 592 | 0.13 |
| 2 | ಬಳ್ಳಾರಿ | 52 | 0.07 |
| 3 | ಬೆಳಗಾವಿ | 1320 | 0.7 |
| 4 | ಬೆಂಗಳೂರು ನಗರ | 740 | 1.54 |
| 5 | ಬೆಂಗಳೂರು ಗ್ರಾಮಾಂತರ | 1440 | 0.38 |
| 6 | ಬೀದರ್ | 211 | 0.49 |
| 7 | ಚಾಮರಾಜನಗರ | 1362 | 0.88 |
| 8 | ಚಿಕ್ಕಬಳ್ಳಾಪುರ | 1659 | 3.92 |
| 9 | ಚಿಕ್ಕಮಗಳೂರು | 596 | 0.09 |
| 10 | ಚಿತ್ರದುರ್ಗ | 734 | 1.06 |
| 11 | ದಕ್ಷಿಣ ಕನ್ನಡ | 1100 | 0.94 |
| 12 | ದಾವಣಗೆರೆ | 1316 | 1.33 |
| 13 | ಧಾರವಾಡ | 453 | 0.75 |
| 14 | ಗದಗ | 294 | 0.14 |
| 15 | ಹಾಸನ | 3197 | 0.86 |
| 16 | ಹಾವೇರಿ | 895 | 0.74 |
| 17 | ಕಲಬುರಗಿ | 108 | 0.084 |
| 18 | ಕೊಡಗು | 91 | 0.025 |
| 19 | ಕೋಲಾರ | 1601 | 2.63 |
| 20 | ಕೊಪ್ಪಳ | 420 | 0.28 |
| 21 | ಮಂಡ್ಯ | 3828 | 0.2 |
| 22 | ಮೈಸೂರು | 3901 | 2.12 |
| 23 | ರಾಯಚೂರು | 134 | 0.15 |
| 24 | ರಾಮನಗರ | 2389 | 0.79 |
| 25 | ಶಿವಮೊಗ್ಗ | 1331 | 0.75 |
| 26 | ತುಮಕೂರು | 3156 | 2.15 |
| 27 | ಉಡುಪಿ | 865 | 0.53 |
| 28 | ಉತ್ತರ ಕನ್ನಡ | 425 | 0.021 |
| 29 | ವಿಜಯನಗರ | 619 | 0.39 |
| 30 | ವಿಜಯಪುರ | 171 | 0.033 |
| 31 | ಯಾದಗಿರಿ | 6 | 0.029 |
| | ಒಟ್ಟು | **35006** | **24.202** |